ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ-೦೭**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತನೆಯ ಅಧಿವೇಶನ**

**(ಮುಂದುವರೆದ ಉಪವೇಶನ)**

**ಬುಧವಾರ, ದಿನಾಂಕ ೨೩ನೇ ಮಾರ್ಚ್, ೨೦೧೬**

---

**ಸಮೂಹ – III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ಜಮೀನುಗಳ ಪಹಣಿ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೧ (೭೫೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆಯಲ್ಲಿರುವ ಜಮೀನುಗಳ ಪಹಣಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಇದರಲ್ಲಿ ದೋಷ ಸಹಿತ ಇರುವ ಪಹಣಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಪೋಡಿಯಾಗಲು ಬಾಕಿ ಇರುವ ಪ್ರಕರಣಗಳೆಷ್ಟು; (ವಿವರ ನೀಡುವುದು)

(ಈ) ಬಾಕಿ ಇರುವ ಪೋಡಿ ಪ್ರಕರಣಗಳನ್ನು ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು; ದೋಷಯುಕ್ತವಿರುವ ಪೋಡಿಗಳನ್ನು ಎಷ್ಟು ದಿನಗಳಲ್ಲಿ ಸರಿಪಡಿಸಲಾಗುವುದು;

(ಉ) ಕಂದಾಯ/ತಿದ್ದುಪಡಿ ಅದಾಲತ್‌ನ ಕಾರ್ಯಕ್ರಮವೇನು; ಇದರ ಅವಧಿಯ ವಿವರವೇನು;

(ಊ) ಕಂದಾಯ/ತಿದ್ದುಪಡಿ ಅದಾಲತ್‌ನ ಮಾರ್ಗಸೂಚಿ/ಸುತ್ತೋಲೆ/ ಆದೇಶಗಳ ಪ್ರತಿ ನೀಡುವುದು?

## ಸರ್ಕಾರಿ ಕಾಲೇಜುಗಳಲ್ಲಿ ಉದ್ಯೋಗ ಮೇಳ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು)** –

೯೨ (೭೯) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು **ತಿಳಿಸುವರೆ** –

(ಅ) ಕಾರ್ಮಿಕ ಇಲಾಖೆ ಆಯೋಜಿಸುತ್ತಿರುವ 'ಉದ್ಯೋಗ ಮೇಳ'ಗಳ ಪರಿಕಲ್ಪನೆಗಳೇನು; (ವಿವರ ನೀಡುವುದು)

(ಆ) ಈ ಉದ್ಯೋಗ ಮೇಳಗಳ ಮೂಲಕ ಈವರೆಗೆ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿದೆ;

(ಇ) ಇನ್ಫೋಸಿಸ್, ವಿಪ್ರೋ ಇತ್ಯಾದಿ ಪ್ರತಿಷ್ಠಿತ ಕಂಪನಿಗಳು ತಮಗೆ ಅಗತ್ಯವಿರುವ ಉದ್ಯೋಗಿಗಳ ಆಯ್ಕೆಗಳನ್ನು ಮತ್ತು ಉದ್ಯೋಗ ಮೇಳಗಳನ್ನು ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ, ಕ್ಯಾಂಪಸ್‌ಗಳಲ್ಲಿ ಕೂಡ ನಡೆಸುವಂತೆ ಸರ್ಕಾರ ಕ್ರಮಕೈಗೊಳ್ಳುವುದೇ;

(ಈ) ಉದ್ಯೋಗ ನೋಂದಣಿ ಕಛೇರಿಗಳ ಈಗಿನ ಸ್ಥಿತಿಗತಿಗಳೇನು; ಹಿಂದೆ ನೋಂದಣಿ ಮಾಡಿರುವ ನಿರುದ್ಯೋಗಿಗಳಿಗೆ ನೀಡಿರುವ ಮಾಹಿತಿಗಳೇನು?

## ಮೈಕೋ (BOSCH) ಕಂಪನಿ ಆಡುಗೋಡಿಯಲ್ಲಿ ೨೬೩ ಕಾರ್ಮಿಕರನ್ನು ವಜಾಗೊಳಿಸುವ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು)–**

೯೩ (೮೦೪) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೈಕೋ (BOSCH) ಲಿಮಿಟೆಡ್ ಕಂಪನಿ, ಆಡುಗೋಡಿ ಇಲ್ಲಿ ಕೆಲಸ ಮಾಡುತ್ತಿದ್ದ ೨೬೩ ಜನ ಕಾರ್ಮಿಕರನ್ನು ಏಕಾ–ಏಕಿ ಕೆಲಸದಿಂದ ತೆಗೆದು ೨೧೦ಕ್ಕೂ ಹೆಚ್ಚು ದಿನಗಳಾಗಿದ್ದು, ಆ ಕಾರ್ಮಿಕರು ಬೀದಿ ಪಾಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕಂಪನಿ ಆಡಳಿತದ ವಿರುದ್ಧ ತೆಗೆದುಕೊಂಡಿರುವ ಕ್ರಮವೇನು;

(ಆ) ಈ ಕಾರ್ಮಿಕರು ಮಾಡುತ್ತಿದ್ದ ಕೆಲಸದ ಜಾಗದಲ್ಲಿ ಹೊರ ರಾಜ್ಯಗಳಾದ (ಅನ್ಯ ಭಾಷಿಕ) ಬಿಹಾರ, ಅಸ್ಸಾಂ, ಉತ್ತರ ಪ್ರದೇಶದ ಮೂಲದವರನ್ನು ಕರೆತಂದು ಕೆಲಸಕ್ಕೆ ನಿಯೋಜನೆ ಮಾಡಲಾಗಿದ್ದು, ಇದು ಕನ್ನಡ ವಿರೋಧಿ ಬೆಳವಣಿಗೆಯೂ ಆಗಿರುವುದರಿಂದ ಈ ಕುರಿತು ಸರ್ಕಾರದ ಕ್ರಮಗಳೇನು;

(ಇ) ೨೬೩ ಕಾರ್ಮಿಕರನ್ನು ಬೀದಿಪಾಲು ಮಾಡಿ ಕಾರ್ಖಾನೆ ನಷ್ಟದಲ್ಲಿದೆ ಎಂದು ಕಾರ್ಮಿಕರಿಗೆ ಕಂಪನಿಯ ಆಡಳಿತದ ವರ್ಗ ಸುಳ್ಳು ಹೇಳಿ ಕಾರ್ಮಿಕರಿಗೆ ಮೋಸ ಮಾಡುತ್ತಿದ್ದು, ಈ ಬಗ್ಗೆ ಸರ್ಕಾರದ ಕ್ರಮವೇನು;

(ಈ) ಒಂದು ವೇಳೆ ನಷ್ಟವಾಗಿದ್ದರೆ, ಸರ್ಕಾರ ನೀಡಿರುವ ಜಮೀನನ್ನು ವಾಪಸ್ಸು ತೆಗೆದುಕೊಳ್ಳಲಾಗುವುದೇ?

## ರಾಜ್ಯದಲ್ಲಿ ಬಗರ್ ಹುಕ್ಕುಂ ಸಾಗುವಳಿಯಿಂದ ಜಮೀನು ಮಂಜೂರಾಗಿರುವ ಬಗ್ಗೆ

**ಹೆಚ್.ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೯೪ (೭೧೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಗರ್ ಹುಕ್ಕುಂ ಸಾಗುವಳಿಯಿಂದ ಎಷ್ಟು ಜಮೀನು ಮಂಜೂರಾಗಿರುತ್ತದೆ: (ವಿವರ ನೀಡುವುದು)

(ಆ) ೨೦೦೩–೦೪ ಸಾಲಿನಿಂದ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು ಹಾಗೂ ಬೆಂಗಳೂರು ನಗರ ಜಿಲ್ಲೆಯ ತಾವರೆಕೆರೆ ಹೋಬಳಿಗೆ ಬಗರ್ ಹುಕ್ಕುಂ ಸಾಗುವಳಿಯಿಂದ ಎಷ್ಟು ಜಮೀನು ಮಂಜೂರಾಗಿರುತ್ತದೆ? (ಅರ್ಹ ಫಲಾನುಭವಿಗಳು ವಿವರ ನೀಡುವುದು)

## ಬರಪೀಡಿತ ಜಿಲ್ಲೆಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್** (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೯೫ (೭೩೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಬರಪೀಡಿತ ಜಿಲ್ಲೆಗಳು ಯಾವುವು;

(ಆ) ಬರಪೀಡಿತ ಜಿಲ್ಲೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)

## ಕಾರ್ಮಿಕ ಕಲ್ಯಾಣ ನಿಧಿ ಮೊತ್ತ ಖರ್ಚಾಗದೇ ಇರುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೯೬ (೭೭೫) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸ್ಥಳೀಯ ಸುಸ್ಥೆಗಳಿಂದ ವಸೂಲಾದ ಕೋಟ್ಯಾಂತರ ಕಾರ್ಮಿಕ ಕಲ್ಯಾಣನಿಧಿ ಮೊತ್ತವು ಖರ್ಚಾಗದೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; (ವಿವರ ಒದಗಿಸುವುದು)

(ಇ) ವಸೂಲಾದ ಒಟ್ಟು ಮೊತ್ತ ಮತ್ತು ಖರ್ಚು ಮಾಡಿದ ಅನುದಾನದ ಮೊತ್ತವೆಷ್ಟು;

(ಈ) ಹೀಗೆ ಸರ್ಕಾರದ ಖಾತೆಯಲ್ಲಿ ಸಾವಿರಾರು ಕೋಟಿ ರೂ. ಹಣ ಖರ್ಚಾಗದೇ ಉಳಿದಿರುವುದು ಸಾರ್ವಜನಿಕರಿಗೆ ಮೋಸ ಮಾಡಿದಂತೆ ಆಗುವುದಿಲ್ಲವೆ;

(ಉ) ವಸೂಲಾದ ಕಾರ್ಮಿಕ ಕಲ್ಯಾಣ ನಿಧಿಯನ್ನು ವ್ಯವಸ್ಥಿತವಾಗಿ ಖರ್ಚು ಮಾಡಲು ಸರ್ಕಾರ ಯಾವ ಹಂತಗಳಲ್ಲಿ ಯಾವ ಕ್ರಮ ಕೈಗೊಳ್ಳಲಿದೆ? (ವಿವರ ಒದಗಿಸುವುದು)

## ಕಾಡುಪ್ರಾಣಿಗಳ ಹಾವಳಿಯಿಂದ ಉಂಟಾಗಿರುವ ತೊಂದರೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೭ (೭೯೨) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಳೆದ ೫ ವರ್ಷಗಳಿಂದ ಕಾಡು ಪ್ರಾಣಿಗಳ ದಾಳಿಗಳಿಂದ ಮೃತಪಟ್ಟವರು, ಗಾಯಗೊಂಡಿರುವವರ ಸಂಖ್ಯೆ ಎಷ್ಟು; (ವಿವರ ನೀಡುವುದು) ಹಾಗೂ ಅವರಿಗೆ ಸರ್ಕಾರದಿಂದ ನೀಡಲಾದ ಪರಿಹಾರ ಎಷ್ಟು; (ಪೂರ್ಣ ವಿವರ ನೀಡುವುದು)

(ಆ) ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಳೆದ ೫ ವರ್ಷಗಳಿಂದ ಬೆಳೆ ಹಾನಿಗೊಳಗಾಗಿರುವ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ, ಬಂದಿದ್ದಲ್ಲಿ ಇದರ ಬಗ್ಗೆ ಸರ್ಕಾರದಿಂದ ಸೂಕ್ತ ಕ್ರಮ ಕೈಗೊಂಡು ರೈತರಿಗೆ ಸೂಕ್ತ ಪರಿಹಾರ ನೀಡಲಾಗಿದೆಯೇ; ಯಾವ ಯಾವ ಬೆಳೆಗಳಿಗೆ ಸರ್ಕಾರ ಎಷ್ಟು ಹಣ ನಿಗದಿಪಡಿಸಿದೆ? (ವಿವರ ನೀಡುವುದು)

## "ಕೆರೆ ಅಭಿವೃದ್ಧಿ ನಾಡಿನ ಶ್ರೇಯೋಭಿವೃದ್ಧಿ" ಯೋಜನೆ ಅನುಷ್ಠಾನ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೮ (೭೫೮) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ "ಕೆರೆ ಅಭಿವೃದ್ಧಿ ನಾಡಿನ ಶ್ರೇಯೋಭಿವೃದ್ಧಿ" ಯೋಜನೆ ಕುರಿತಾದ ಅನುಷ್ಠಾನದ ವಿವರಗಳು ಯಾವುವು;

(ಆ) ಸದರಿ ಯೋಜನೆಯಡಿ ೨೦೧೪–೧೫ ಮತ್ತು ೨೦೧೫–೧೬ರಲ್ಲಿ ಕೈಗೊಂಡ ಎಲ್ಲ ಕೆರೆ ಅಭಿವೃದ್ಧಿ ಕಾಮಗಾರಿಗಳು ಯಾವುವು; (ವರ್ಷವಾರು ತಾಲ್ಲೂಕುವಾರು ಕೆರೆವಾರು ಪ್ರತಿ ಕೆರೆ ಕಾಮಗಾರಿಗೆ ನಿಗದಿಪಡಿಸಿದ ಮೊತ್ತ, ಮತ್ತಿತರ ವಿವರಗಳನ್ನು ಒದಗಿಸುವುದು)

(ಇ) ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ವಿವಿಧ ಸಣ್ಣ ನೀರಾವರಿ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿ ಏನು? (ವಿವರ ನೀಡುವುದು)

## ಕನ್ನಡ ಚಲನಚಿತ್ರ ರಂಗದಲ್ಲಿ ಕೆಲಸ ಮಾಡುವ ಕಾರ್ಮಿಕರ ಬಗ್ಗೆ

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶನ ಹೊಂದಿದವರು) –**

೯೯ (೮೨೧) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು **ತಿಳಿಸುವರೆ –**

(ಅ) ಕನ್ನಡ ಚಲನಚಿತ್ರ ರಂಗದಲ್ಲಿ ಕೆಲಸ ಮಾಡುವ ಕಾರ್ಮಿಕರ ಕಲ್ಯಾಣಕ್ಕಾಗಿ ಇಲಾಖೆ ಕೈಗೊಂಡಿರುವ ಯೋಜನೆಗಳಾವುವು;

(ಆ) ಕಳೆದ ೮೨ ವರ್ಷಗಳ ಇತಿಹಾಸ ಇರುವ ಚಿತ್ರರಂಗದಲ್ಲಿ ಎರಡು–ಮೂರು ತಲೆಮಾರುಗಳಿಂದ ಕೆಲಸ ನಿರ್ವಹಿಸುತ್ತಿರುವ ನಿವೃತ್ತ ಕಾರ್ಮಿಕರುಗಳಿಗೆ ಸಾಮಾಜಿಕ ಭದ್ರತೆ ಒದಗಿಸಲು ಪಿಂಚಣಿ ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ;

(ಇ) ಚಲನಚಿತ್ರ ರಂಗದ ಕಾರ್ಮಿಕರ ಮಕ್ಕಳಿಗೆ ತಾಂತ್ರಿಕ (ಇಂಜಿನಿಯರಿಂಗ್) ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶಾವಕಾಶದಲ್ಲಿ ಕನಿಷ್ಠ ೨% ಮೀಸಲಾತಿಯನ್ನು ಕಲ್ಪಿಸುವ ಬಗ್ಗೆ ಸರ್ಕಾರದ ನಿಲುವೇನು;

(ಈ) ಈ ರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಕಾರ್ಮಿಕರ ಬಗ್ಗೆ ವಿಶೇಷವಾದ ಯೋಜನೆಗಳನ್ನು ಇಲಾಖೆ ರೂಪಿಸಿದೆಯೇ; ಮುಖ್ಯವಾಗಿ ವಿಧವೆಯವರಿಗೆ ಮಾಶಾಸನ ನೀಡುವ ಬಗ್ಗೆ ಯಾವುದಾದರೂ ಪ್ರತ್ಯೇಕವಾದ ಅವಕಾಶವನ್ನು ಕಲ್ಪಿಸಲಾಗಿದೆಯೇ?

## ಹೈದರಾಬಾದ್-ಕರ್ನಾಟಕ ಭಾಗದಲ್ಲಿ "ತಾಲ್ಲೂಕಿಗೊಂದು ಹಸಿರು ಶಾಲಾವನ" ಎಂಬ ಯೋಜನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೧೦೦ (೭೮೫) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅರಣ್ಯ ಅಭಿವೃದ್ಧಿ ಹಾಗೂ ಮರ-ಗಿಡಗಳನ್ನು ಬೆಳೆಸಲು ಸರ್ಕಾರ ೨೦೧೫-೧೬ನೇ ಸಾಲಿನಲ್ಲಿ "ತಾಲ್ಲೂಕಿಗೊಂದು ಹಸಿರು ಶಾಲಾವನ" ಎಂಬ ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದು, ಈ ಯೋಜನೆಯಡಿಯಲ್ಲಿ ಹೈದರಾಬಾದ್-ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪ್ಪನಹಳ್ಳಿ ತಾಲ್ಲೂಕು ಸೇರಿದಂತೆ ಒಟ್ಟು ಆಯ್ಕೆಯಾದ ಶಾಲೆಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸದರಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಕಾಲಾವಧಿಯನ್ನು ನಿಗದಿಪಡಿಸಲಾಗಿದೆಯೇ; ಇದ್ದಲ್ಲಿ, ಮಾಹಿತಿ ನೀಡುವುದು;

(ಇ) "ತಾಲ್ಲೂಕಿಗೊಂದು ಹಸಿರು ಶಾಲಾವನ" ಯೋಜನೆಯ ನಿಯಮ ಯೋಜನೆಯ ರೂಪುರೇಷೆಗಳು ಹಾಗೂ ಮಾರ್ಗಸೂಚಿಗಳೇನು? (ವಿವರ ನೀಡುವುದು)

## ರಾಜ್ಯದಲ್ಲಿರುವ ಬರಪೀಡಿತ ತಾಲ್ಲೂಕುಗಳಿಗೆ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)-**

೧೦೧ (೭೨೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡಲಾಗಿದೆ; (ವಿವರ ನೀಡುವುದು)

(ಆ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾಗಿದೆಯೇ; ಹಾಗಿದ್ದಲ್ಲಿ, ಇಲ್ಲಿಗೆ ಬಿಡುಗಡೆಯಾಗಿರುವ ಹಣ ಎಷ್ಟು ಹಾಗೂ ಅದರಲ್ಲಿ ಖರ್ಚು ಮಾಡಲಾಗಿರುವ ಹಣ ಎಷ್ಟು? (ವಿವರ ನೀಡುವುದು)

## ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕುಮ್ಕಿ ಹಕ್ಕು ಮಂಜೂರು ಮಾಡಲು ಇರುವ ಮಾನದಂಡದ ಬಗ್ಗೆ

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)–**

೧೦೨ (೭೬೨) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕುಮ್ಕಿ ಹಕ್ಕು ಎಂದರೇನು, ಕುಮ್ಕಿ ಹಕ್ಕು ಮಂಜೂರು ಮಾಡುವ ಮಾನದಂಡ ಯಾವುದು; ಕುಮ್ಕಿ ಹಕ್ಕಿನ ಪರಿಮಿತಿ ಎಷ್ಟು;

(ಆ) ೧೯೬೪ನೇ ಇಸವಿಯವರೆಗೆ ಕುಮ್ಕಿ ಹಕ್ಕುಗಳನ್ನು ಸಕ್ರಮ ಮಾಡಿದ್ದು ಅನಂತರ ಸಕ್ರಮಗೊಳಿಸದಿರಲು ಕಾರಣವೇನು;

(ಇ) ಕುಮ್ಕಿ ಹಕ್ಕು ಸಕ್ರಮಗೊಳಿಸದಿರುವುದರಿಂದ ರೈತರು ಸಮಸ್ಯೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಕುಮ್ಕಿ ಹಕ್ಕು ಜಮೀನಿನ ಸಕ್ರಮಾತಿ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ?

## ಕೃಷ್ಣಭಾಗ್ಯ ಜಲ ನಿಗಮದ ವ್ಯಾಪ್ತಿಯಲ್ಲಿನ ಏತ ನೀರಾವರಿ ಯೋಜನೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೦೩ (೮೧೧) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೃಷ್ಣಾಭಾಗ್ಯ ಜಲ ನಿಗಮದ ವ್ಯಾಪ್ತಿಯಲ್ಲಿ ಬರುವ ಕೃಷ್ಣಾ ಕೊಳ್ಳದ ಮುಳವಾಡ–ಹಂತ–೩, ಮಸೂತಿ–ಪ್ಯಾಕೇಜ್–೩ ಹಾಗೂ ಚಿಮ್ಮಲಗಿ ಏತ ನೀರಾವರಿ ಯೋಜನೆ ಪ್ರಾರಂಭಗೊಂಡಿದ್ದು ಯಾವಾಗ; ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ; (ಪ್ರಕ್ರಿಯೆಯ ವಿವರ ನೀಡುವುದು)

(ಆ) ಸದರಿ ಕಾಮಗಾರಿಗಳನ್ನು ಯಾರಿಗೆ ಗುತ್ತಿಗೆ ನೀಡಲಾಗಿದೆ; ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಲಾಗಿದ್ದ ಕಾಲಾವಧಿ ಎಷ್ಟು;

(ಇ) ಇಲ್ಲಿಯವರೆವಿಗೆ ಎಷ್ಟು ಪ್ರಮಾಣದ ಕಾಮಗಾರಿ ಪೂರ್ಣಗೊಂಡಿರುತ್ತದೆ; ಇನ್ನೂ ಎಷ್ಟು ಕಾಮಗಾರಿ ಬಾಕಿ ಇರುತ್ತದೆ? (ಪ್ರಗತಿವಾರು ವಿವರ ನೀಡುವುದು)

## ಥಾಮಸ್ ವರದಿಯ ಅನುಷ್ಠಾನದನ್ವಯ ಖಾಸಗಿ ಅನುದಾನಿತ ಐ.ಟಿ.ಐ.ಗಳ ಅರ್ಹ ನೌಕರರುಗಳಿಗೆ ವೇತನ ನಿಗದಿ ಮತ್ತು ಮರು ನಿಗದಿಗೊಳಿಸಿರುವ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬರ್ (ನಾಮನಿರ್ದೇಶನ ಹೊಂದಿದವರು) –**

೧೦೪ (೮೮೪) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಥಾಮಸ್ ವರದಿಯ ಅನುಷ್ಠಾನದನ್ವಯ ಖಾಸಗಿ ಅನುದಾನಿತ ಐ.ಟಿ.ಐ.ಗಳ ಅರ್ಹ ನೌಕರರಿಗೆ ವೇತನ ನಿಗದಿ ಮತ್ತು ಮರು ನಿಗದಿಗೊಳಿಸಲು ಇಲಾಖೆಯು ಒಂದು ಉಪ ಸಮಿತಿ ರಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದರ ಎಲ್ಲ ಸದಸ್ಯರ ವಿವರಗಳನ್ನು ಪದನಾಮದೊಂದಿಗೆ ನೀಡುವುದು ಮತ್ತು ಉಪ ಸಮಿತಿಯು ನಿಗದಿಪಡಿಸಿದ ವೇತನವನ್ನು ದೃಢೀಕರಿಸಿದ ಎಲ್ಲಾ ಆದೇಶಗಳ ಪ್ರತಿಗಳನ್ನು ಒದಗಿಸುವುದು ಹಾಗೂ ಇದಕ್ಕೆ ಸಂಬಂಧಿಸಿದಂತೆ ಆಯುಕ್ತರು ಜಾರಿಗೊಳಿಸಿದ ನಡಾವಳಿಗಳು/ಆದೇಶಗಳನ್ನು ಒದಗಿಸುವುದು;

(ಆ) ಸರ್ಕಾರಿ ಐ.ಟಿ.ಐ.ಗಳ ನೌಕರರು ಸಿಟಿಐ/ಎಟಿಐ ತರಬೇತಿ ಪಡೆದು ಹಾಗೂ ಇಲಾಖಾ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ನಂತರವೇ ಇವರ ಖಾಯಂಪೂರ್ವ ಅವಧಿಯನ್ನು ಘೋಷಿಸಲಾಗುತ್ತದೆ ಮತ್ತು ಕಾಲಬದ್ಧ ಮುಂಬಡ್ತಿ ಪರಿಗಣಿಸಲಾಗುತ್ತದೆ ಎಂಬುವ ವಿಷಯ ಸರ್ಕಾರದ ಗಮನಕ್ಕಿದೆಯೇ; ಹಾಗಿದ್ದಲ್ಲಿ, ಥಾಮಸ್ ವರದಿಯ ಅನುಷ್ಠಾನದನ್ವಯ ಖಾಸಗಿ ಅನುದಾನಿತ ಐ.ಟಿ.ಐ.ಗಳ ನೌಕರರಿಗೆ ವೇತನ ಮರುನಿಗದಿಗೊಳಿಸಿ, ಕಾಲಬದ್ಧ ಮುಂಬಡ್ತಿ ಪಡೆಯುತ್ತಿರುವವರು ಈ ಮೇಲಿನ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಾರೆಯೇ; ಇಲ್ಲದಿದ್ದಲ್ಲಿ, ಯಾವ ಮಾನದಂಡದಡಿ ವೇತನ ನಿಗದಿ ಮತ್ತು ಮರುನಿಗದಿಗೊಳಿಸಲಾಗಿದೆ; ಈ ಬಗ್ಗೆ ಸಂಪೂರ್ಣ ವಿವರ ನೀಡುವುದು:

(ಇ) ಸರ್ಕಾರಿ ಐ.ಟಿ.ಐ.ಗಳ ನೌಕರರಿಗೆ ಮುಂಬಡ್ತಿ ನೀಡುವಾಗ ಇಲಾಖೆಯು ಸಂಪೂರ್ಣ ಸಿಬ್ಬಂದಿಯವರ ಜೇಷ್ಠತಾ ಪಟ್ಟಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆದರೆ ಖಾಸಗಿ ಅನುದಾನಿತ ಐ.ಟಿ.ಐ.ಗಳ ನೌಕರರಿಗೆ ಮುಂಬಡ್ತಿ ನೀಡುವಾಗ ಕೇವಲ ಆ ಸಂಸ್ಥೆಗೆ ಸೀಮಿತವಾದಂತೆ ಹಿರಿಯ ಸಿಬ್ಬಂದಿಯವರನ್ನು ಮುಂಬಡ್ತಿಗೆ ಪರಿಗಣಿಸಲಾಗುತ್ತದೆ ಎಂಬುವ ವಿಷಯ ಸರ್ಕಾರದ ಗಮನಕ್ಕಿದೆಯೇ; ಹೀಗಿದ್ದಲ್ಲಿ, ಖಾಸಗಿ ಅನುದಾನಿತ ಐ.ಟಿ.ಐ.ಗಳಲ್ಲಿ ಮುಂಬಡ್ತಿ ಪಡೆದಿರುವ ನೌಕರರಿಗೆ, ಥಾಮಸ್ ವರದಿಯ ಅನುಷ್ಠಾನದನ್ವಯ ಯಾವ ಷರತ್ತಿನಡಿ ವೇತನ ನಿಗದಿ ಮತ್ತು ಮರು ನಿಗದಿಗೊಳಿಸಲಾಗಿದೆ? (ಸಂಪೂರ್ಣ ವಿವರಗಳನ್ನು ನೀಡುವುದು)

## ರಾಜ್ಯದಲ್ಲಿನ ಐ.ಟಿ.ಐ. ಕಾಲೇಜುಗಳ ಗುಣಮಟ್ಟದ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೦೫ (೭೫೪) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಐ.ಟಿ.ಐ. ಕಾಲೇಜುಗಳ ಗುಣಮಟ್ಟ ನಿಗದಿಗೆ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮ ಏನು; (ಸರ್ಕಾರಿ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳು)

(ಆ) Quality Council of India ದಿಂದ ಐ.ಟಿ.ಐ. ಕಾಲೇಜುಗಳ ಮೌಲ್ಯಮಾಪನ ಹಾಗೂ ಅಕ್ರಿಡೇಷನ್‌ಗೆ ಒಳಪಡಿಸಲು ನಿರ್ಣಯಿಸಲಾಗಿದೆಯೇ; ಈ ನಿಟ್ಟಿನಲ್ಲಿ ಸರ್ಕಾರ ಆ ಸಂಸ್ಥೆಗಳಿಗೆ ನೀಡುತ್ತಿರುವ ಆಡಳಿತಾತ್ಮಕ ತಾಂತ್ರಿಕ ಹಣಕಾಸು ನೆರವು ಏನು;

(ಇ) ಈ ಒಟ್ಟು ಪ್ರಕ್ರಿಯೆ ರಾಜ್ಯದಲ್ಲಿ ಯಾವ ಹಂತದಲ್ಲಿದೆ? (ಸಂಪೂರ್ಣ ವಿವರ ನೀಡುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಕಾಸೂ–1093–1500 ಪ್ರತಿಗಳು (೭೧)